# ಹಿಂದೂ ಕೋಡ್ ಬಿಲ್: ಡಾ.ಬಿ.ಆರ್. ಅಂಬೇಡ್ಕರ್ & ಸಾಮಾಜಿಕ ನ್ಯಾಯ

**ಶ್ರೀಧರ ಶಂಕ್ರಪ್ಪ ಕಾಳಿ* & ಸುಭಾಸಚಂದ್ರ ಸಿ. ನಾಟಿಕಾರ್****

**DOI: https://doi.org/10.5281/zenodo.19638001**

**ABSTRACT**

ಸ್ವಾತಂತ್ರ್ಯ ನಂತರದ ಭಾರತದಲ್ಲಿ ಹಿಂದೂ ವೈಯಕ್ತಿಕ ಕಾನೂನನ್ನು ಸುಧಾರಿಸಲು ಮತ್ತು ಅದನ್ನು ಲಿಂಗ ಭೇದವಿಲ್ಲದೆ ಏಕೀಕರಿಸಲು ಮಾಡಿದ ಅತ್ಯಂತ ಮಹತ್ವದ ಶಾಸಕಾಂಗ ಪ್ರಯತ್ನಗಳಲ್ಲಿ ಒಂದಾಗಿದೆ, ಅದರಲ್ಲೂ ಪ್ರಮುಖವಾಗಿ ಸಮಾನತೆಯ ಹರಿಕಾರರೆಂದೇ ಪ್ರಸಿದ್ಧರಾದ ಡಾ. ಬಿ. ಆರ್. ಅಂಬೇಡ್ಕರ್ ಅವರ ಪಾತ್ರ ಹಿಂದೂ ಕೋಡ್ ಬಿಲ್ ಜಾರಿಯಲ್ಲಿ ಐತಿಹಾಸಿಕವಾದದ್ದು. ಭಾರತದ ಮೊದಲ ಕಾನೂನು ಸಚಿವರಾಗಿ ಅಧಿಕಾರ ಸ್ವೀಕರಿಸಿದ ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರು ಪಿತೃಪ್ರಭುತ್ವದ ಸಾಮಾಜಿಕ ರಚನೆಯನ್ನು ಕೆಡವಲು ಮತ್ತು ಮಹಿಳೆಯರಿಗೂ ಸಹ ಪುರುಷ ಸಮಾನ ಸ್ಥಾನಮಾನ ಕಲ್ಪಿಸಲು ಮಾಡಿದ ಪ್ರಯತ್ನ ಅವಿಸ್ಮರಣೀಯವಾದದ್ದು. ಮಸೂದೆಯು ಪ್ರಮುಖವಾಗಿ ವೈವಿಧ್ಯಮಯವಾಗಿದ್ದ ಹಿಂದೂ ಕಾನೂನುಗಳನ್ನು ಒಂದೇ ಸ್ಪಷ್ಟ ಮತ್ತು ಸಮಾನ ಸಂಹಿತೆಯಾಗಿ ಕ್ರೋಢೀಕರಿಸುವ ಗುರಿಯನ್ನು ಹೊಂದಿತ್ತು ಹಾಗೂ ಅದನ್ನು ಡಾ. ಬಿ. ಆರ್. ಅಂಬೇಡ್ಕರ್ ಅವರು "ಮಹಿಳೆಯರ ಹಕ್ಕುಗಳ ಚಾರ್ಟರ್" ಎಂದೇ ಪರಿಗಣಿಸಿದರು. ಇದರಲ್ಲಿ ಅವರು ಹೆಣ್ಣುಮಕ್ಕಳಿಗೆ ಸಮಾನ ಆಸ್ತಿ, ಅನುವಂಶೀಯತೆ, ಮದುವೆಯಲ್ಲಿ ಜಾತಿ ಅಡೆತಡೆಗಳನ್ನು ನಿರ್ಮೂಲನೆ ಮಾಡುವುದು ಮತ್ತು ವಿಚ್ಛೇದನಕ್ಕೆ ಕಾನೂನುಬದ್ಧ ಹಕ್ಕು ಮುಂತಾದ ಕ್ರಾಂತಿಕಾರಿ ಬದಲಾವಣೆಗಳನ್ನು ಪರಿಚಯಿಸಿದರು; ಆದ್ದರಿಂದ ಈ ಗ್ರಂಥದಲ್ಲಿ ಮಸೂದೆ ಮತ್ತು ಅಂಬೇಡ್ಕರ್ ಅವರ ಪಾತ್ರವನ್ನು ಸುತ್ತುವರೆದಿರುವ ಐತಿಹಾಸಿಕ ವಿಶ್ಲೇಷಣೆಯನ್ನು ನೀಡಲಾಗಿದೆ.

**KEYWORDS:** ಹಿಂದೂ ಕೋಡ್ ಬಿಲ್, ಡಾ. ಬಿ. ಆರ್. ಅಂಬೇಡ್ಕರ್, ಮಹಿಳಾ ವಿಮೋಚನೆ, ಸಾಮಾಜಿಕ ನ್ಯಾಯ, ಲಿಂಗ ಸಮಾನತೆ.

* **ಶ್ರೀಧರ ಶಂಕ್ರಪ್ಪ ಕಾಳಿ,** ಪಿ. ಜಿ. ಡಿಪ್ಲೊಮಾ ವಿದ್ಯಾರ್ಥಿ, ಡಾ. ಬಿ. ಆರ್. ಅಂಬೇಡ್ಕರ್ ಅಧ್ಯಯನ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

** **ಡಾ. ಸುಭಾಸಚಂದ್ರ ಸಿ. ನಾಟಿಕಾರ್,** ಸಂಯೋಜಕರು, ಡಾ. ಬಿ. ಆರ್. ಅಂಬೇಡ್ಕರ್ ಅಧ್ಯಯನ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

**ಪೀಠಿಕೆ**

ಭಾರತದ ಹೆಣ್ಣುಮಕ್ಕಳ ಸ್ವಾತಂತ್ರ್ಯ ಮತ್ತು ಸಮಾನತೆಗೆ ಸಂಬಂಧಿಸಿದ ಹಿಂದೂ ಸಂಹಿತೆ ಮಸೂದೆಯು ಡಾ. ಬಿ. ಆರ್. ಅಂಬೇಡ್ಕರ್ ಅವರು ಭಾರತದ ಮೊದಲ ಕಾನೂನು ಸಚಿವರಾಗಿದ್ದಾಗ ಕೈಗೊಂಡ ಅತ್ಯಂತ ನೇರ ಮತ್ತು ಐತಿಹಾಸಿಕ ವಿವಾದಾತ್ಮಕ ಯೋಜನೆಯಾಗಿದೆ ಏಕೆಂದರೆ ಇದು ಕೇವಲ ಕಾನೂನು ದಾಖಲೆಯಾಗಿರಲಿಲ್ಲ ಆದರೆ ಹಿಂದೂ ಸಮಾಜವನ್ನು ಆಧುನಿಕರಿಸುವ ಮತ್ತು ನಾಗರಿಕರ ಖಾಸಗಿ ಜೀವನದಲ್ಲಿ ಸಮಾನತೆ ಮತ್ತು ನ್ಯಾಯದ ಸಾಂವಿಧಾನಿಕ ಮೌಲ್ಯಗಳನ್ನು ಅಳವಡಿಸುವ ಗುರಿಯನ್ನು ಹೊಂದಿರುವ ಕ್ರಾಂತಿಕಾರಿ ಪ್ರಣಾಳಿಕೆಯಾಗಿತ್ತು. ಡಾ. ಬಿ. ಆರ್. ಅಂಬೇಡ್ಕರ್ ಅವರೇ ಹೇಳಿದಂತೆ "ಸಾಮಾಜಿಕ ಪ್ರಜಾಪ್ರಭುತ್ವವಿಲ್ಲದೆ ರಾಜಕೀಯ ಪ್ರಜಾಪ್ರಭುತ್ವ ಅರ್ಥಹೀನ" ಎಂದು ಅಂಬೇಡ್ಕರ್ ನಂಬಿದ್ದರು, ಅದರಂತೆಯೇ ಅವರು ಸಮಾಜದಲ್ಲಿ ಮಹಿಳೆಯರ ಸ್ಥಿತಿಗತಿ ದಲಿತರಿಗಿಂತ ಭಿನ್ನವೇನಿಲ್ಲ ಎಂದು ಭಾವಿಸಿ ಮಹಿಳೆಯರ ಸಮಾನತೆಗಾಗಿ ಹೋರಾಡಿದರು. ಈ ಹಿಂದೂ ಸಂಹಿತೆ ಮಸೂದೆಯು ಹೊಸದೇನಲ್ಲ, 1941 ರಲ್ಲಿ ಬಿ. ಎನ್. ರಾವ್ ಸಮಿತಿ ಹಾಗೂ 1944 ರಲ್ಲಿ ಇನ್ನೊಂದು ಸಮಿತಿಯನ್ನು ಇದಕ್ಕಾಗಿ ರಚಿಸಿದರು ಆಗಲೂ ಸಹ ಅವು ವಿಫಲವಾಗಿದ್ದವು ಏಕೆಂದರೆ ವೈದಿಕ ಧರ್ಮದ ಬ್ರಾಹ್ಮಣ್ಯ ಮನಸ್ಥಿತಿಯ ಪಿತೃಪ್ರಭುತ್ವ ಸಾಮಾಜಿಕ ರಚನೆಯಿಂದ ನಡೆದು ಬಂದ ಭಾರತ ಇದನ್ನು ಅಷ್ಟು ಸುಲಭವಾಗಿ ಸ್ವೀಕರಿಸಲಿಲ್ಲ. ಅದರಂತೆ ಅಂದಿನ ಈ ಗಾಢವಾದ ಬ್ರಾಹ್ಮಣ್ಯದ ದಬ್ಬಾಳಿಕೆಯ ಸಮಾಜದಲ್ಲಿ ಹೋರಾಟವನ್ನೇ ಮಾಡುತ್ತಾ ಬಂದ ಬಾಬಾಸಾಹೇಬರು ಈ ಜವಾಬ್ದಾರಿಯನ್ನು ಹೊತ್ತುಕೊಂಡು 1948 ರಿಂದ 1951 ರವರೆಗೆ ಇದರ ಬಗ್ಗೆ ಆಳವಾಗಿ ಅಧ್ಯಯನ ನಡೆಸಿ ಕರಡು ರಚಿಸಿದರು. ಆದರೆ ಆಗಲೂ ಸಹ ಪಿತೃಪ್ರಭುತ್ವದ ರೂಢಿಯ ಭಾರತ ಮಹಿಳೆಯರ ಸಮಾನ ಸ್ಥಾನಮಾನವನ್ನು ಧರ್ಮವಿರೋಧಿ ಪ್ರಕ್ರಿಯೆ ಎಂದು ಕರೆಯಿತು, ಆದ್ದರಿಂದ ಈ ಲೇಖನದಲ್ಲಿ ಬಾಬಾಸಾಹೇಬ್ ಅಂಬೇಡ್ಕರ್ ಅವರು ಹಿಂದೂ ಸಂಹಿತೆಗಾಗಿ ಹಿಡಿದ ಛಲ ಮತ್ತು ಕೊನೆಗೆ ಮಾಡಿದ ತ್ಯಾಗದ ಕುರಿತು ತಿಳಿಯೋಣ.

**ಹಿಂದೂ ಕೋಡ್ ಬಿಲ್ ಎಂದರೇನು?**

ಹಿಂದೂ ಕೋಡ್ ಬಿಲ್ ಎಂದರೆ ಸಾಮಾನ್ಯವಾಗಿ ನಮಗೆ ತಿಳಿದಿರುವಂತೆ ಹಿಂದೂ ಕಾನೂನುಗಳನ್ನು ಏಕೀಕರಿಸಲು ಮತ್ತು ವೈವಿಧ್ಯಮಯವಾಗಿದ್ದ ಕಾನೂನುಗಳನ್ನು ಕ್ರೋಢೀಕರಿಸಿ ಎಲ್ಲರಿಗೂ ಲಿಂಗ ಭೇದವಿಲ್ಲದೆ ಸಮಾನ ಪ್ರಾತಿನಿಧ್ಯ ಒದಗಿಸುವ ಒಂದು ಮಹತ್ವದ ಮಹಿಳಾ ಹಕ್ಕಾಗಿದೆ. ವಿದೇಶಿ ಧರ್ಮಗಳಾದ ಮುಸ್ಲಿಂ, ಕ್ರಿಶ್ಚಿಯನ್, ಯಹೂದಿ ಮತ್ತು ಪಾರ್ಸಿಗಳನ್ನು ಹೊರತುಪಡಿಸಿ ಎಲ್ಲ ನಾಗರಿಕರಿಗೆ ಅನ್ವಯವಾಗುತ್ತಿತ್ತು ಹಾಗೂ ವಿಶೇಷವಾಗಿ ಮಲಬಾರ್ ಕರಾವಳಿಯ ಮಾತೃವಂಶೀಯ ವ್ಯವಸ್ಥೆಯನ್ನು ಹೊರತುಪಡಿಸಿ ಎಲ್ಲ ಸ್ಥಳೀಯ ಪದ್ಧತಿಗಳನ್ನು ರದ್ದುಗೊಳಿಸುವ ಪ್ರಕ್ರಿಯೆಯಾಗಿತ್ತು ಹಾಗೂ ಡಾ. ಬಿ. ಆರ್. ಅಂಬೇಡ್ಕರ್ ಅವರು ಸಿದ್ಧಪಡಿಸಿದ ಹಿಂದೂ ಸಂಹಿತೆ ಕರಡು ಒಟ್ಟು 9 ಭಾಗಗಳನ್ನು ಒಳಗೊಂಡಿತ್ತು. ಅದರಲ್ಲಿ ಪ್ರಮುಖವಾಗಿ ವಿವಾಹ ಮತ್ತು ವಿವಾಹ ವಿಚ್ಛೇದನ, ದತ್ತಕ ಸ್ವೀಕಾರ, ಪಾಲಕತ್ವ, ಹೆಣ್ಣುಮಕ್ಕಳ ಆಸ್ತಿ ಮತ್ತು ಉತ್ತರಾಧಿಕಾರತ್ವವೆಂಬ ಪ್ರಮುಖ ಭಾಗಗಳು ಇದ್ದವು, ಇವುಗಳು ಮಹಿಳೆಯರಿಗೆ ಸಮಾನ ಸ್ಥಾನಮಾನ ಸಾರಿದವು ಆದ್ದರಿಂದ ಪಿತೃಪ್ರಭುತ್ವದ ಭಾರತ ಸಹಜವಾಗಿ ಅದನ್ನು ಒಪ್ಪಿಕೊಳ್ಳಲಿಲ್ಲ. ಆದರೆ ಕಾಲ ಕಳೆದಂತೆ ಬಾಬಾಸಾಹೇಬರ ಕರಡಿನಲ್ಲಿದ್ದ ಒಂದೊಂದೇ ಕಾನೂನುಗಳನ್ನು ನೆಹರೂರವರು ಮುಂದೆ ಹಂತ ಹಂತವಾಗಿ ಜಾರಿಗೆ ತಂದರು; ಅವುಗಳೇ ಇಂದು ನಮಗೆಲ್ಲರಿಗೂ ತಿಳಿದಿರುವಂತೆ ಹಿಂದೂ ವಿವಾಹ

ಕಾಯ್ದೆ, ಹಿಂದೂ ಉತ್ತರಾಧಿಕಾರ ಕಾಯ್ದೆ, ವರದಕ್ಷಿಣೆ ನಿಷೇಧ ಕಾಯ್ದೆ, ವಿವಾಹ ವಿಚ್ಛೇದನ ಮತ್ತು ಆಸ್ತಿ ಹಕ್ಕು ಇತ್ಯಾದಿ. ಇವುಗಳೆಲ್ಲವುಗಳ ಮೂಲ ಹಿಂದೂ ಸಂಹಿತೆ ಮಸೂದೆಯೇ ಆಗಿತ್ತು.

**ಹಿನ್ನೆಲೆ**

ಸಾಮಾನ್ಯವಾಗಿ ಹಿಂದೂ ಕೋಡ್ ಬಿಲ್ ಮಸೂದೆಯ ಹಿನ್ನೆಲೆಯನ್ನು ಸಹಜವಾಗಿ ಪ್ರಾಚೀನ ಕಾಲದಿಂದ ತಿಳಿಯಬಹುದಾಗಿದೆ ಏಕೆಂದರೆ ತಮಗೆಲ್ಲರಿಗೂ ತಿಳಿದಿರುವಂತೆ ವೇದಗಳ ಕಾಲವನ್ನು ಎರಡು ಭಾಗವಾಗಿ ವಿಂಗಡಿಸುತ್ತೇವೆ. ಅದರಲ್ಲಿ ವೇದಪೂರ್ವ ಕಾಲದಲ್ಲಿ ಮಹಿಳೆಯರಿಗೆ ಪುರುಷರ ಸಮಾನವಾದ ಸ್ವಾತಂತ್ರ್ಯ ಮತ್ತು ಸಮಾನತೆ ಇತ್ತೆಂದು ತಿಳಿದುಬರುತ್ತದೆ; ಅಮೆರಿಕಾ ಮತ್ತು ಗ್ರೀಕರು ಋಗ್ವೇದದಲ್ಲಿ ಮಾನವ ಇತಿಹಾಸ ಇದೆ ಎಂದು ಹೇಳಿದ್ದನ್ನು ಶಂಭಾ ಜೋಶಿಯವರು ತಮ್ಮ 'ಸಂಸ್ಕೃತಿ ಶೋಧ' ಕೃತಿಗಳಲ್ಲಿ ಉಲ್ಲೇಖಿಸಿದ್ದಾರೆ. ಗಾರ್ಗಿ, ಮೈತ್ರೇಯಿ & ವಿಶ್ವವರಾ ಎಂಬ ಸ್ತ್ರೀ ವಿದ್ವಾಂಸರು ಸಹ ಇದ್ದಾರೆಂದು ನಮ್ಮ ಇತಿಹಾಸದ ಮೂಲಕ ತಿಳಿದುಬರುತ್ತದೆ, ಆದರೆ ಕಾಲ ಕಳೆದಂತೆ ವೈದಿಕ ಧರ್ಮದಲ್ಲಿ ಬ್ರಾಹ್ಮಣ್ಯ ದಬ್ಬಾಳಿಕೆ ಹೆಚ್ಚಾಯಿತು, ಮನುವಿನ "ಮನುಸ್ಮೃತಿ" ಎಂಬ ಕರಾಳ ಶಾಸನ ಹಿಂದೂ ಧರ್ಮದ ಗ್ರಂಥವಾಯಿತು. ಆಗ ಹಿಂದೂ ಧರ್ಮವನ್ನು ನಾಲ್ಕು ವರ್ಣಗಳಾಗಿಯೂ ಅದರಲ್ಲಿಯೂ ಮೇಲು-ಕೀಳು ಎಂಬ ಶ್ರೇಣಿವ್ಯವಸ್ಥೆಯ ಉಗಮದೊಂದಿಗೆ ಮಹಿಳೆಯರ ಸ್ವಾತಂತ್ರ್ಯ ಮತ್ತು ಸಮಾನತೆಯನ್ನು ಸಹ ಕಿತ್ತುಕೊಳ್ಳಲಾಯಿತು ಹಾಗೂ ಪೂರ್ವ ವೇದ ಕಾಲದಲ್ಲಿದ್ದ ಸಮಾನತೆಯ ಅಂಶಗಳು ವೇದೋತ್ತರ ಕಾಲದಲ್ಲಿ ಮಾಯವಾದವು.

ಬಹುಪತ್ನಿತ್ವದ ಆಚರಣೆ ಸಹಜವಾಯಿತು, ಮಹಿಳೆಯ ಪತಿ ತೀರಿಕೊಂಡರೆ ಸತಿಯು ಸಹ ಚಿತೆಗೆ ಹಾರಬೇಕಾಗಿತ್ತು, ಇಲ್ಲದಿದ್ದರೆ ಜೀವನಪೂರ್ತಿ ವಿಧವೆ ಎಂಬ ಪಟ್ಟದೊಂದಿಗೆ ಕ್ರೂರ ಆಚರಣೆಗೆ ಒಳಗಾಗಬೇಕಿತ್ತು ಹಾಗೂ ಮಹಿಳೆಯರಿಗೆ ಶಿಕ್ಷಣದ ಅವಕಾಶವೇ ಇರಲಿಲ್ಲ ಹಾಗೂ ಅವಳನ್ನು ಒಂದು ಹೆರಿಗೆ ಯಂತ್ರದಂತೆ ಭಾವಿಸಲಾಗಿತ್ತು; ಅವಳು ಎಂದಿಗೂ ತನ್ನ ಗಂಡನಿಗೆ ವಿಧೇಯಳಾಗಿರಬೇಕು ಮತ್ತು ಅವನ ಸೇವೆಯನ್ನು ಮಾಡಬೇಕೆಂದು ಮನುಸ್ಮೃತಿ ತಿಳಿಸಿತು. ಅವಳು ಸುಲಭವಾಗಿ ವಿಚ್ಛೇದನ ಕೊಡುವ ಕನಿಷ್ಠ ಸ್ವಾತಂತ್ರ್ಯವೂ ಸಹ ಅವಳಿಗಿರಲಿಲ್ಲ, ಒಂದು ಸಲ ವಿವಾಹವಾದರೆ ಅವಳ ಪತಿ ಎಂತಹವನೇ ಆಗಿರಲಿ ಅವಳು ಅದನ್ನು ಸಹಿಸಿಕೊಂಡಿರಬೇಕಿತ್ತು ಹಾಗೂ ಮಹಿಳೆಯರಿಗೆ ಯಾವುದೇ ರೀತಿಯ ನೀತಿ ನಿರ್ಧಾರ ತೆಗೆದುಕೊಳ್ಳುವ ಹಕ್ಕು ಇರಲಿಲ್ಲ ಮತ್ತು ಮತದಾನದ ಅವಕಾಶವೇ ಇರಲಿಲ್ಲ ಹಾಗೂ ತಂದೆಯ ಆಸ್ತಿಯಲ್ಲಿ ಮಗಳಿಗೆ ಯಾವುದೇ ಪಾಲುದಾರಿಕೆ ಇರಲಿಲ್ಲ. 'ಕೊಟ್ಟ ಹೆಣ್ಣು ಕುಲಕ್ಕೇ ಹೊರಗು' ಎಂಬ ನುಡಿಗಟ್ಟಿನಂತೆ ಮಹಿಳೆ ಖಾಸಗಿ ಆಸ್ತಿಯಿಂದ ವಂಚಿತಳಾಗಿದ್ದಳು. ಇದರಿಂದಾಗಿ ಅವಳಿಗೆ ಆರ್ಥಿಕ ಸ್ವಾತಂತ್ರ್ಯವಿರಲಿಲ್ಲ ಹಾಗಾಗಿ ಸಾಮಾಜಿಕ ಮಾನ್ಯತೆಯೂ ಇಲ್ಲದೆ ಮಹಿಳೆ ಅಸಹಾಯಕಳಾಗಿ ಬದುಕುತ್ತಿದ್ದಳು. ಆ ಅಸಹಾಯಕತೆ ಕಾರಣವಾಗಿ ಅವಳ ಮೇಲೆ ಶೋಷಣೆ ದೌರ್ಜನ್ಯ ಹೆಚ್ಚಿದ್ದವು. ಪ್ರತಿಯೊಬ್ಬ ಮನುಷ್ಯನಿಗೂ ಸ್ವಾಭಿಮಾನ ಮತ್ತು ಆತ್ಮಗೌರವದಿಂದ ಬದುಕುವ ಹಕ್ಕಿದೆ. ಭಾರತದ ಪ್ರತಿಯೊಬ್ಬ ಮಹಿಳೆಗೂ ಇಂಥ ಘನತೆಯ ಬದುಕು ಇರಬೇಕು ಎಂಬ ಮಹಾದಾಸೆಯಿಂದ ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರು ಹಿಂದೂ ಕೋಡ್ ಬಿಲ್ ಕರಡು ತಯಾರಿಸಿದರು.

ಡಾ. ಬಿ. ಆರ್. ಅಂಬೇಡ್ಕರ್ ಅವರ ಪಾತ್ರ ನಾವು ಸಾಮಾನ್ಯವಾಗಿ ಡಾ. ಬಿ. ಆರ್. ಅಂಬೇಡ್ಕರ್ ಅವರನ್ನು ಜಾತಿ ವಿನಾಶದ ಐಕಾನ್ ಅಥವಾ ಭಾರತೀಯ ಸಂವಿಧಾನದ

ಪಿತಾಮಹ ಎಂದು ಪರಿಗಣಿಸುತ್ತೇವೆ ಅದಾಗ್ಯೂ ಅವರಲ್ಲಿ ಅಷ್ಟೇನೂ ತಿಳಿದಿಲ್ಲದ ಒಂದು ಅಂಶವೇನೆಂದರೆ, ಅವರು ಕಟ್ಟಾ ಸ್ತ್ರೀವಾದಿ. ಹುಟ್ಟಿನಿಂದ ಅಸಮಾನತೆ ಅಸ್ಪೃಶ್ಯತೆಯಂತಹ ಅವಮಾನಗಳನ್ನೇ ಅನುಭವಿಸುತ್ತಾ ಬೆಳೆದ ಬಾಬಾಸಾಹೇಬರು ದಲಿತರ ಹೋರಾಟದ ಜೊತೆ ಜೊತೆಗೆ ಮಹಿಳೆಯರ ಸಮಾನತೆಯ ಹೋರಾಟವೂ ಸಹ ಅತ್ಯಗತ್ಯ ಎಂದು ಅವರಿಗೆ ಬಹಳ ಬೇಗ ತಿಳಿಯಿತು ಹಾಗೂ ಭಾರತ ಇತಿಹಾಸದ ಸಮಗ್ರ ಅಧ್ಯಯನ ನಡೆಸಿದವರು ದಲಿತರ ಜೊತೆಗೆ ಮಹಿಳೆಯರ ಪರಿಸ್ಥಿತಿಯೂ ಕೂಡ ಭಿನ್ನವಾಗಿಲ್ಲ ಎಂಬುದನ್ನು ಅರಿತರು. ಆದ್ದರಿಂದಲೇ ಡಾ. ಬಿ. ಆರ್. ಅಂಬೇಡ್ಕರ್ ಅವರು ಮಹಿಳೆಯರಿಗಾಗಿ ಮಾಡಿದ ಕಾರ್ಯ ಇಂದಿಗೂ ಅವಿಸ್ಮರಣೀಯವಾಗಿದೆ, ಪುರುಷರಂತೆಯೇ ಸಂವಿಧಾನಬದ್ಧವಾಗಿ ಅವರಿಗೂ ಮತದಾನದ ಹಕ್ಕಿನ ಜೊತೆಗೆ ಎಲ್ಲ ವಿಧದಲ್ಲೂ ಪುರುಷರಿಗೆ ಸಮಾನವಾದ ಸ್ವಾತಂತ್ರ್ಯವನ್ನು ಸಹ ಕೊಟ್ಟರು.

ಹೀಗೆ ಸ್ವತಂತ್ರ ಭಾರತದ ಮೊದಲ ಕಾನೂನು ಸಚಿವರಾಗಿ ಅಧಿಕಾರ ಸ್ವೀಕರಿಸಿದ ಬಾಬಾಸಾಹೇಬರು ಭಾರತದ ಮಹಿಳೆಯರ ಉದ್ಧಾರಕ್ಕಾಗಿ 1948 ರಿಂದ 1951 ರವರೆಗೆ ಹಿಂದೂ ಸಂಹಿತೆ ಮಸೂದೆಯ ಕರಡನ್ನು ರಚಿಸಿದರು, ಅದು ಪ್ರಮುಖವಾಗಿ ಮಹಿಳೆಯರಿಗೆ ವಿವಾಹ ಮತ್ತು ವಿಚ್ಛೇದನದ ಆಯ್ಕೆ, ಆಸ್ತಿಯಲ್ಲಿ ಪಾಲು, ಉತ್ತರಾಧಿಕಾರತ್ವದ ಹಕ್ಕು ಮತ್ತು ದತ್ತಕದ ಹಕ್ಕು ಮುಂತಾದ ಪ್ರಮುಖ ಕಾನೂನುಗಳನ್ನು ಒಳಗೊಂಡಿತ್ತು. ವೈವಿಧ್ಯಮಯವಾಗಿದ್ದ ಹಿಂದೂ ಕಾನೂನುಗಳನ್ನು ಸ್ವತಂತ್ರ ಭಾರತದಲ್ಲಿ ಏಕೀಕೃತಗೊಳಿಸುವುದು ಅವರ ಉದ್ದೇಶವಾಗಿತ್ತು ಹಾಗೂ ಲಿಂಗ ಅಸಮಾನತೆಯನ್ನು ತೊಡೆದು ಹಾಕುವುದು ಡಾ. ಬಿ. ಆರ್. ಅಂಬೇಡ್ಕರ್ ಅವರ ಗುರಿಯಾಗಿತ್ತು ಹಾಗೂ ಮಹಿಳೆಯರ ಸ್ವಾವಲಂಬನೆ ಸಾಧಿಸುವುದು ಇದರ ಗುರಿಯಾಗಿತ್ತು. ಪುರುಷರಂತೆ ಮಹಿಳೆಯು ಸಹ ತಂದೆಯ ಆಸ್ತಿಯಲ್ಲಿ ಸಮಾನ ಪಾಲು ಪಡೆಯುವುದು ಮತ್ತು ಏಕಪತ್ನಿತ್ವವನ್ನು ಜಾರಿಗೊಳಿಸುವುದು ಹಾಗೂ ವಿವಾಹಗಳಲ್ಲಿ ಜಾತಿಭೇದಗಳನ್ನು ಹೋಗಲಾಡಿಸುವ ಮೂಲಕ ಅಂತರ್ಜಾತಿ ವಿವಾಹಕ್ಕೆ ಪ್ರೋತ್ಸಾಹಿಸುವುದು ಹಾಗೂ ಮಹಿಳೆಯರಿಗೆ ವಿಚ್ಛೇದನದ ಆಯ್ಕೆಯ ಸ್ವಾತಂತ್ರ್ಯವನ್ನು ನೀಡಲಾಗಿತ್ತು. ಆದರೆ ಅಂದಿನ ಇಡೀ ಸಂಪ್ರದಾಯವಾದಿ ಸದನ ಇದನ್ನು ವಿರೋಧಿಸಿತು ಮತ್ತು ಧರ್ಮವಿರೋಧಿ ಪ್ರಕ್ರಿಯೆ ಎಂದು ಕರೆಯಿತು, ಇದರಲ್ಲಿ ಸ್ವತಃ ಕೆಲ ಮಹಿಳೆಯರು ವಿರೋಧಿಸಿದರಲ್ಲದೆ ಅಂದಿನ ಅಖಿಲ ಭಾರತ ಹಿಂದೂ ಮಹಾ ಸಮ್ಮೇಳನದ ಅಧ್ಯಕ್ಷರಾದ "ಶ್ರೀಮತಿ ಜಾನಕಿಬಾಯಿ ಜೋಶಿ" ಇದನ್ನು ವಿರೋಧಿಸಿದರು ಹಾಗೂ ಸ್ವತಃ "ಸರೋಜಿನಿ ನಾಯ್ಡು" ಅವರು ಮಸೂದೆ ಅಂಗೀಕಾರವಾದರೆ ಉಪವಾಸ ಸತ್ಯಾಗ್ರಹ ಮಾಡುವುದಾಗಿ ಬೆದರಿಕೆಯನ್ನು ಸಹ ಹಾಕಿದರು. ಆದರೆ ಇದೆಲ್ಲದರ ಹೊರತಾಗಿಯೂ ಛಲ ಬಿಡದ ಬಾಬಾಸಾಹೇಬರು ಮಹಿಳೆಯರ ಪರವಾಗಿ ವಾದಿಸಿದರು, ಆದ್ದರಿಂದಲೇ ಹಿಂದೂ ಸಂಹಿತೆ ಮಸೂದೆಯಲ್ಲಿ ಲಿಂಗ ಸಮಾನತೆಗಾಗಿ ಬಾಬಾಸಾಹೇಬರು ಸಂಪ್ರದಾಯವಾದಿಗಳೊಂದಿಗೆ ಧರ್ಮಯುದ್ಧವನ್ನೇ ಮಾಡಬೇಕಾಯಿತು.

**ಹಿಂದೂ ಮಹಿಳೆಯರ ವಿಮೋಚನೆ**

ನಮಗೆಲ್ಲರಿಗೂ ತಿಳಿದಿರುವಂತೆ ಹಿಂದೂ ಸಂಹಿತೆ ಮಸೂದೆಯು ಮುಖ್ಯವಾಗಿ ಮಹಿಳೆಯರ ವಿಮೋಚನೆಯ ಗುರಿಯನ್ನು ಹೊಂದಿತ್ತು. ಶತಶತಮಾನಗಳಿಂದ ಮೂಢ ಆಚರಣೆಗಳಿಂದಾಗಿ ಸಮಾಜದಲ್ಲಿ ಅರ್ಧದಷ್ಟಿರುವ ಹೆಣ್ಣು ಎಂಬ ಜಾತಿ ಹಿಂದಿನಿಂದಲೂ ಶೋಷಣೆ ಅನುಭವಿಸುತ್ತಾ ಬಂದಿತ್ತು. ಶಿಕ್ಷಣವನ್ನು ಪಡೆದರೆ ಮಹಿಳೆಯರ ನಾಲಿಗೆ ಸೀಳಬೇಕೆಂಬ ಮನುಸ್ಮೃತಿಯ ಕಾನೂನು, ತಂದೆಯ ಆಸ್ತಿಯಲ್ಲಿಯೂ ಕೊನೆಗೆ ಗಂಡನ

ಆಸ್ತಿಯಲ್ಲಿಯೂ ಯಾವುದೇ ರೀತಿಯ ಗುರುತು ಹೊಂದಿರದ ಸ್ಥಿತಿ ಮಹಿಳೆಯರದಾಗಿತ್ತು. ಹಾಗೂ ತನಗಿಷ್ಟದಂತೆ ವಿವಾಹವಾಗುವ ಆಯ್ಕೆ ಅವಳಿಗೆ ಇರಲಿಲ್ಲ, ಒಂದು ವೇಳೆ ಆದರೂ ಗಂಡನು ಎಂತಹ ದುಷ್ಟನಾದರೂ ಅವಳ ಈ ಜನುಮ ಅವನ ಸೇವೆಯಲ್ಲಿಯೇ ಸೀಮಿತವಾಗಿತ್ತು ಮತ್ತು ಅವನು ಸತ್ತನಂತರ ತಾನು ಸಹ ಸಾಯುವ ಕ್ರೂರ ಆಚರಣೆ ಮಹಿಳೆಯರಿಗೆ ಮಾತ್ರವಿತ್ತು. ಉತ್ತರಾಧಿಕಾರದ ಹಕ್ಕಂತೂ ಮೊದಲೇ ಇರಲಿಲ್ಲ ಏಕೆಂದರೆ ಹೆಣ್ಣು ದೇವರನ್ನು ಪೂಜಿಸುವ ಬ್ರಾಹ್ಮಣ್ಯರು ಹೆಣ್ಣನ್ನು ಎಂದೂ ಸಹ ಮಾನವೀಯತೆಯ ದೃಷ್ಟಿಯಿಂದ ನೋಡಲಿಲ್ಲ!. ಅಷ್ಟೇ ಅಲ್ಲದೆ ಇನ್ನು ಅನೇಕ ರೀತಿಯ ಕ್ರೂರ ಆಚರಣೆಗಳಿಗೆ ಬಲಿಯಾಗಿ ಸಹ ಅದೇ ಸಂಪ್ರದಾಯವೆಂಬಂತೆ ಬಿಂಬಿಸಿ ಸ್ವತಃ ಅವರಿಂದಲೇ ಅದನ್ನು ಒಪ್ಪಿಸಿದ ಸಮಾಜ ಇಂದಿಗೂ ಅವರಿಗೆ ಸಮಾನತೆ ನೀಡಲೇ ಇಲ್ಲ.

ಆದರೆ ಸಮಾನತೆಯ ಹರಿಕಾರರಾದ ಬಾಬಾಸಾಹೇಬ್ ಅಂಬೇಡ್ಕರ್ ಅವರು ಮಹಿಳೆಯರ ವಿಮೋಚನೆಗೆ ದೊಡ್ಡ ಹೆಜ್ಜೆಯನ್ನಿಟ್ಟರು; ಕಾರ್ಮಿಕ ಕಾನೂನುಗಳಿಂದಾಗಿ ಮಹಿಳೆಯರಿಗೆ ಅನೇಕ ರೀತಿಯ ಸುಧಾರಣೆ ತಂದರು ಅದರಲ್ಲಿ ಪ್ರಮುಖವಾಗಿ ಸಮಾನ ವೇತನ ಕಾಯ್ದೆ, ಆರೋಗ್ಯ ರಕ್ಷಣೆ, ಕಾರ್ಮಿಕರ ರಕ್ಷಣೆ ಕಾಯ್ದೆ ಮತ್ತು ಹೆರಿಗೆ ರಜೆ ಕಾಯ್ದೆ ಹಾಗೂ ಮೇಲೆ ತಿಳಿಸಿದ ಯಾವ ಯಾವ ತಾರತಮ್ಯಗಳಿದ್ದವೋ ಅವೆಲ್ಲವುಗಳಿಗೂ ಪರಿಹಾರ ತಂದರು. ಈ ಭಾರತ ದೇಶವನ್ನಾಳಿದ ಬ್ರಿಟಿಷರಿಗಿಂತಲೂ ಮೊದಲೇ ಭಾರತದ ಮಹಿಳೆಯರಿಗೆ ಮತದಾನದ ಹಕ್ಕನ್ನು ನೀಡಿದ ಕೀರ್ತಿ ಅವರಿಗೆ ಸಲ್ಲುತ್ತದೆ ಮತ್ತು ಸಂವಿಧಾನದ 15ನೇ ವಿಧಿಯನ್ನು ಈ ಮಸೂದೆಯಲ್ಲಿ ಬಲವಾಗಿ ಮಂಡಿಸಿದರು ಮತ್ತು ಮಹಿಳೆಯರ ವಿಮೋಚನೆಯೇ ಸ್ಪಷ್ಟ ಗುರಿ ಎಂದು ಪ್ರತಿಪಾದಿಸಿದರು.

“ನಾನು ಒಂದು ಸಮುದಾಯದ ಪ್ರಗತಿಯನ್ನು ಆ ಸಮುದಾಯದ ಮಹಿಳೆಯರು ಸಾಧಿಸಿರುವ ಪ್ರಗತಿಯ ಮಟ್ಟದಿಂದ ಅಳೆಯುತ್ತೇನೆ.”– ಡಾ. ಬಿ. ಆರ್. ಅಂಬೇಡ್ಕರ್.

**ಹಿಂದೂ ಕೋಡ್ ಬಿಲ್ ವಿಫಲ & ಡಾ. ಬಿ. ಆರ್. ಅಂಬೇಡ್ಕರ್ ಅವರ ರಾಜೀನಾಮೆ**

ಅಂದಿನ ಜಾತಿಗ್ರಸ್ತ, ಪುರುಷಪ್ರಧಾನ ಸಾಮಾಜಿಕ ರಚನೆಯನ್ನು ಹೊಂದಿದ್ದ ಭಾರತದಲ್ಲಿ ಈ ಮಸೂದೆ ತರುವುದು ಅಷ್ಟು ಸುಲಭವಾಗಿರಲಿಲ್ಲ ಆದ್ದರಿಂದಲೇ ಇದನ್ನು ಅಂಬೇಡ್ಕರ್ ಅವರ ಧರ್ಮಯುದ್ಧ ಎಂದು ಕರೆದಿರುವುದು ಏಕೆಂದರೆ ಅಂದಿನ ಸದನದಲ್ಲಿ ಸಂಪ್ರದಾಯವಾದಿಗಳೇ ತುಂಬಿದ್ದರು, ಈ ಮಸೂದೆಯು ಹಿಂದೂ ಧರ್ಮದ ವಿರೋಧಿ ಎಂದು ಅವರು ಅಪಪ್ರಚಾರ ಮಾಡಿದರು ಹಾಗೂ ಹಿಂದೂ ಮಹಾಸಭಾ ಇದನ್ನು ಬಹಿರಂಗವಾಗಿ ವಿರೋಧಿಸಿತು. ಇದಕ್ಕೆ ಅವರು ಕೊಟ್ಟ ಕಾರಣ “ಮಸೂದೆಯು ಹಿಂದೂ ಧಾರ್ಮಿಕ ಕಾನೂನುಗಳಲ್ಲಿ ಹಸ್ತಕ್ಷೇಪ ಮಾಡಿದೆ” ಎಂದು; ಭಾರತದ ಮೊದಲ ರಾಷ್ಟ್ರಪತಿಯಾದ ಬಾಬು ರಾಜೇಂದ್ರ ಪ್ರಸಾದ್ ಅವರು ಸಹ ಇದನ್ನು ವಿರೋಧಿಸಿದರು ಹಾಗೂ ಪಟ್ಟಾಭಿ ಸೀತಾರಾಮಯ್ಯ, ವಲ್ಲಭಬಾಯಿ ಪಟೇಲರಂತಹ ಕಾಂಗ್ರೆಸ್ ನಾಯಕರು ಇದಕ್ಕೆ ವಿರೋಧ ವ್ಯಕ್ತಪಡಿಸಿದರು.

“ಈ ಸದನದ ಅರ್ಧ ಡಜನ್ ಸ್ತ್ರೀ ಸದಸ್ಯರು ನಮ್ಮ ಕಾಲು ಹಿಡಿದು ಎಳೆದು ನಮ್ಮನ್ನು ಈ ಮಸೂದೆಯನ್ನು ಕೈಗೆತ್ತಿಕೊಳ್ಳುವಂತೆ ಮಾಡಬಲ್ಲವರಾಗಿದ್ದರೆ, ಒಂದು ವೇಳೆ 250 ಜನರಿದ್ದರೆ ನಮ್ಮ ಪರಿಸ್ಥಿತಿ ಏನಾಗಬಹುದು?” ಎಂದು ಪಟ್ಟಾಭಿ ಸೀತಾರಾಮಯ್ಯನವರು ಚರ್ಚೆಯ ವೇಳೆ ಹೀಗೆ ಹೇಳಿದ್ದರು, ಇದು ಅವರ ಸ್ತ್ರೀ ವಿರೋಧಿ ಧೋರಣೆಯನ್ನು ತೋರಿಸುತ್ತದೆ. ಅದಷ್ಟೇ ಅಲ್ಲದೆ “ನಾವು ಈ ಸದನದಲ್ಲಿ ಶೇಕಡ 80 ರಷ್ಟು ಒಂದೇ

ಕೋಮಿನವರು ಆಗಿದ್ದ ಒಂದೇ ಪಿತೃಪ್ರಧಾನ ವ್ಯವಸ್ಥೆಯಿಂದ ಕೂಡಿದ್ದೇವೆ ಅವರೆಲ್ಲರೂ ಈ ಮಸೂದೆಯ ವಿರುದ್ಧ ರೊಚ್ಚಿಗೆದ್ದಿದ್ದಾರೆ'' ಎಂದು ಸಹ ಬೆದರಿಸಿದರು. ಶ್ರೀ ಗೋಕುಲಬಾಯಿ ದೌಲತ್ ರಾಮ್ ಭಟ್ ಎಂಬುವವರು ``ಒಂದು ಸ್ತ್ರೀ ವರದಕ್ಷಿಣೆಯನ್ನು ತೆಗೆದುಕೊಂಡು ಹೋಗುತ್ತಾಳೆ ಹಾಗೂ ಗಂಡನ ಆಸ್ತಿಯಲ್ಲೂ ಪಾಲುದಾರಳಾಗುತ್ತಾಳೆ. ಆದ್ದರಿಂದ ಅವಳಿಗೆ ತಂದೆಯ ಆಸ್ತಿಯಲ್ಲಿ ಪಾಲು ಏಕೆ ಕೊಡಬೇಕು, ನಮ್ಮ ಸಹೋದರಿಯರಿಗೆ ಇಷ್ಟು ಸ್ವಾರ್ಥ ಏಕೆ ಬೇಕು?'' ಎಂದು ಪ್ರಶ್ನಿಸಿದರು. ಇವರಷ್ಟೇ ಅಲ್ಲದೆ ದುರ್ದೈವವೆಂದರೆ ಸ್ವತಃ ಹೆಣ್ಣಾಗಿ ಹುಟ್ಟಿದ ಶ್ರೀಮತಿ ಜಾನಕಿಬಾಯಿ ಜೋಶಿ ಮತ್ತು ಸರೋಜಿನಿ ನಾಯ್ಡು ಸಹ ಇದನ್ನು ವಿರೋಧಿಸಿದರು.

ಇದೆಲ್ಲದರ ನಡುವೆ ಏಕಾಂಗಿಯಾಗಿ ಭಾರತದ ಕಟ್ಟಕಡೆಯ ಹೆಣ್ಣುಮಗಳಿಗಾಗಿ ಬಲವಾಗಿ ವಾದಿಸಿದ ಡಾ. ಬಿ. ಆರ್. ಅಂಬೇಡ್ಕರ್ ಅವರು ಕೊನೆಗೆ ಸಂಪ್ರದಾಯವಾದಿಗಳಿಂದಾಗಿ ಈ ಮಸೂದೆಯು ವಿಫಲವಾಯಿತು, ಆದ್ದರಿಂದ ತಮ್ಮ ಸಮಾನತೆಯ ಸಿದ್ಧಾಂತಕ್ಕೆ ಧಕ್ಕೆ ಬಂದಿತೆಂದು ಬಾಬಾಸಾಹೇಬರು 1951 ಸೆಪ್ಟೆಂಬರ್ 27 ರಂದು ಆ ಕ್ಷಣದಲ್ಲೇ ತಮ್ಮ ಸಚಿವ ಸ್ಥಾನಕ್ಕೆ ರಾಜೀನಾಮೆ ಕೊಟ್ಟು ಹೊರಬಂದರು. ಇದು ಭಾರತದ ಮಹಿಳೆಯರಿಗಾಗಿ ಬಾಬಾಸಾಹೇಬರು ಮಾಡಿದ ಅವಿಸ್ಮರಣೀಯ ತ್ಯಾಗ ಆದ್ದರಿಂದಲೇ ಹಿಂದೂ ಸಂಹಿತೆ ಮಸೂದೆಯಲ್ಲಿ ಅವರ ಪಾತ್ರ ಸಾಮಾನ್ಯವಾದುದಲ್ಲ. ಇದರ ಪ್ರತಿರೂಪವಾಗಿ ಮುಂದೆ ಹಂತ ಹಂತವಾಗಿ ಹಿಂದೂ ವಿವಾಹ ಕಾಯ್ದೆ 1955, ಹಿಂದೂ ಉತ್ತರಾಧಿಕಾರ ಕಾಯ್ದೆ 1956, ವರದಕ್ಷಿಣೆ ನಿಷೇಧ ಕಾಯ್ದೆ 1961, ಆಸ್ತಿಯಲ್ಲಿ ಸಮಾನ ಪಾಲು ಮುಂತಾದ ಕಾಯ್ದೆಗಳು ಹೆಣ್ಣುಮಕ್ಕಳಿಗೆ ಸಮಾನತೆಯನ್ನು ನೀಡಿದವು ಆದರೆ ಇವೆಲ್ಲವುಗಳಿಗೂ ಮೂಲ ಡಾ. ಬಿ. ಆರ್. ಅಂಬೇಡ್ಕರ್ ಅವರ ಹಿಂದೂ ಸಂಹಿತೆ ಮಸೂದೆ.

**ಉಪಸಂಹಾರ**

ಒಟ್ಟಾರೆಯಾಗಿ ಹಿಂದೂ ಸಂಹಿತೆ ಮಸೂದೆಯಲ್ಲಿ ಡಾ. ಬಿ. ಆರ್. ಅಂಬೇಡ್ಕರ್ ಅವರ ಪಾತ್ರವೂ ಭಾರತೀಯ ಮಹಿಳೆಯರ ಅಸ್ಮಿತೆಯನ್ನು ಗುರುತಿಸಿತು ಹಾಗೂ ಮಹಿಳೆಯರ ಸಮಾನತೆಯನ್ನು ಗುರುತಿಸುವ ನಿಟ್ಟಿನಲ್ಲಿ ಭಾರತದ ಕಾನೂನು ನಿರ್ಮಾಪಕರು ಮಹಿಳೆ ತನ್ನದೇ ಆದ ಹಕ್ಕುಗಳನ್ನು ಹೊಂದಿರುವ ಮನುಷ್ಯ ಎಂದು ಗುರುತಿಸಿದ್ದು ಇದೇ ಮೊದಲು. ಆದ್ದರಿಂದ ಇಂದು ಆಸ್ತಿಯನ್ನು ಅನುವಂಶಿಕವಾಗಿ ಪಡೆಯುವ, ಕಾನೂನುಬದ್ಧ ವಿಚ್ಛೇದನ ಬಯಸುವ ಹಾಗೂ ತನ್ನ ಸ್ವಂತ ಸಂಗಾತಿಯನ್ನು ತನ್ನಿಚ್ಛೆಯಂತೆ ಆಯ್ಕೆ ಮಾಡುವ ಪ್ರತಿಯೊಬ್ಬ ಹಿಂದೂ ಮಹಿಳೆ ಅಂಬೇಡ್ಕರ್ ಅವರ ಪರಿಶ್ರಮ ಮತ್ತು ಕಾನೂನು ಪ್ರತಿಭೆಗೆ ಋಣಿಯಾಗಿರುತ್ತಾರೆ.

## ಪರಾಮರ್ಶನ ಗ್ರಂಥಗಳು:


1. Dr. B. R. Ambedkar Speech and Writings Published by Karnataka Government Vol. No. 14
2. Ambedkar, B. R. (1916). Castes in India: Their Mechanism, Genesis and Development, Indian Antiquary, Vol. 41
3. Ambedkar, B. R. (1949). Speech in the Constituent Assembly of India. New Delhi: Government of India.
4. Ambedkar, B. R. (1951). The Hindu Code Bill. Government of India, Parliamentary Debates.
5. Guru, G. (1995). Dalit Women Talk Differently. Economic and Political Weekly, 30(41/42), 2548–2550.
6. Keer, D. (1990). Dr. Babasaheb Ambedkar: Life and Mission. Popular Prakashan.
7. Thorat, S. (2011). Ambedkar's Vision of Social Justice. Indian Journal of Labour Economics, 54(2), 239–248.
8. Hindu Code Bill – Dr. B. R. Ambedkar